**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ19-11-2021**

ಪಾಟೀ ಸವಾಲುಃ ಶ್ರೀ ಸಿ.ಡಿ.ಎಸ್. 2 ರಿಂದ 4 ಮತ್ತು 6 ರಿಂದ 8 ನೇ ಪ್ರತಿವಾದಿ ಪರ ವಕೀಲರಿಂದ

ನಾನು 2005 ರಿಂದ ನನ್ನ ಕುಟುಂಬದ ಜೊತೆ ಸಕಲೇಶಪುರ ಟೌನ್ ಲಕ್ಷ್ಮಿಪುರಂ ನಲ್ಲಿ ವಾಸವಿದ್ದೇನೆ. 2005 ರ ಪೂರ್ವದಲ್ಲಿ ನಾನು ಹಾಸನದಲ್ಲಿ ವಾಸವಿದ್ದೆನು. ನಾನು ಮೂಲತಃ ಸೋಮವಾರಪೇಟೆ ತಾಲ್ಲೂಕು ಮಲ್ತೆ ಗ್ರಾಮದವಳು. ನನ್ನ ತಾಯಿ ಗೌರಮ್ಮ ಮೃತಪಟ್ಟಿರುತ್ತಾರೆ , ತಂದೆ ಸ್ವಾಮಿ ಜೀವಂತವಿರುತ್ತಾರೆ, ನನಗೆ ಒಬ್ಬಳು ತಂಗಿ ಮತ್ತು ಒಬ್ಬ ತಮ್ಮ ಇರುತ್ತಾರೆ. ನನ್ನ ಸಂಬಂಧಿಕರೆಲ್ಲಾ ಲಕ್ಷ್ಮಿಪುರಂ ನಲ್ಲಿ ವಾಸವಿದ್ದಾರೆ, ನಾನು ಒಕ್ಕಲಿಗ ಸಮುದಾಯಕ್ಕೆ ಸೇರಿರುತ್ತೇನೆ. ನನ್ನ ವಾದಪತ್ರದ 2 ನೇ ಪ್ಯಾರಾದಲ್ಲಿ ಹೇಳಿರುವ ಜನಾರ್ಧನ್, ಕುರುಫ್ ಮತ್ತು ನಾಗಮ್ಮ ರವರು ಮಲೆಯಾಳಿ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಜನಾರ್ಧನ್ ಕುರುಫ್ ಮತ್ತು ನಾಗಮ್ಮ ರವರು ನಾಯರ್ ಜಾತಿಗೆ ಸೇರಿರುತ್ತಾರೆ. ಜನಾರ್ಧನ್ ಕುರುಫ್ ಮತ್ತು ನಾಗಮ್ಮ ರವರು ಯಾವಾಗ ಸಕಲೇಶಪುರಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜನಾರ್ಧನ್ ಕುರುಫ್ ಮತ್ತು ನಾಗಮ್ಮ ರವರಿಗೆ ಒಟ್ಟು 9 ಜನ ಮಕ್ಕಳಿದ್ದು , ಅದರಲ್ಲಿ ಮೈಸೂರಿನಲ್ಲಿ ವಸಂತಿ , ಗೀತಾ , ಲತಾ ಮೂವರು ವಾಸವಿರುತ್ತಾರೆ , ಸ್ವಪ್ನ ಕುಶಾಲನಗರದಲ್ಲಿ , ಕಲಾ ಸಕಲೇಶಪುರದಲ್ಲಿ ವಾಸವಿರುತ್ತಾರೆ. ರವೀಂದ್ರ , ಗಿರೀಶ್ , ಅನಿಲ್ ಕುಮಾರ್, ಜಯಕುಮಾರ್ ರವರು ಅವರುಗಳಲ್ಲಿ ಇಬ್ಬರು ಪಿರಿಯಾಪಟ್ಟಣದಲ್ಲಿ ವಾಸವಿದ್ದಾರೆ , ಒಬ್ಬರು ಸಕಲೇಶಪುರದಲ್ಲಿ ವಾಸವಿದ್ದಾರೆ, ನನ್ನ ಗಂಡ ಮೃತಪಟ್ಟಿರುತ್ತಾರೆ. ನಾನು ಮೇಲೆ ಹೇಳಿರುವ ವ್ಯಕ್ತಿಗಳ ಮನೆಗೆ ಯಾವತ್ತೂ ಭೇಟಿ ಕೊಟ್ಟಿರುವುದಿಲ್ಲ. ಆದರೆ ಸಕಲೇಶಪುರ ಆನೆಮಹಲ್ ನಲ್ಲಿರುವ ಮನೆಗೆ ಭೇಟಿ ಕೊಟ್ಟಿರುತ್ತೇನೆ. ನನ್ನ ಮದುವೆ ಅನಿಲ್ ಕುಮಾರ್ ರವರ ಜೊತೆ 2000 ನೇ ಸಾಲಿನ ಮಾರ್ಚ್ 11 ಮತ್ತು 12 ರಂದು ಆಗಿರುತ್ತದೆ. ಜನಾರ್ಧನ್ ಮತ್ತು ನಾಗಮ್ಮ ರವರು ನನ್ನನ್ನು ಮದುವೆ ಪೂರ್ವದಲ್ಲಿ ಹೆಣ್ಣು ನೋಡಲು ಬಂದಿರುವುದಿಲ್ಲ. ಪ್ರತಿವಾದಿಯರು ನನ್ನನ್ನು ಹೆಣ್ಣು ನೋಡಲು ಬಂದಿರುವುದಿಲ್ಲ. ನನ್ನ ತಂದೆ ತಾಯಿ ಜನಾರ್ಧನ್ ರವರ ಮನೆಗೆ ಹೋಗಿ ನನ್ನನ್ನು ಮದುವೆ ಮಾಡಿಕೊಡುತ್ತೇವೆ ಎಂದು ಮಾತುಕತೆ ಮಾಡಿರುವುದಿಲ್ಲ. ನಮ್ಮ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಮ್ಮ ಮನೆಯವರಾಗಲೀ ಅಥವಾ ಜನಾರ್ಧನ್ ಕುರುಫ್ ರವರ ಮನೆಯವರಾಗಲೀ ಮಾಡಿಸಿರುವುದಿಲ್ಲ. ನನ್ನ ಮದುವೆ ಲಗ್ನವನ್ನು ಬರೆಸಿರುವುದಿಲ್ಲ. ನನ್ನ ಮದುವೆಯನ್ನು ಬಸವಯ್ಯ ಎಂಬ ಪುರೋಹಿತರು ಕೊಡಗಿನ ಹೊನ್ನಮ್ಮನಕೆರೆ ದೇವಸ್ಥಾನದಲ್ಲಿ ಮಾಡಿಸಿರುತ್ತಾರೆ. ನನ್ನ ವಾದಪತ್ರದಲ್ಲಿ ನನ್ನ ಮದುವೆ

ಹೊನ್ನಮ್ಮನಕೆರೆ ದೇವಸ್ಥಾನದಲ್ಲಿ ಆಗಿರುತ್ತದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ನಮ್ಮ ಮದುವೆ ಒಕ್ಕಲಿಗ ಸಂಪ್ರದಾಯದ ಪ್ರಕಾರ ಆಗಿರುತ್ತದೆ. ಹೊನ್ನಮ್ಮನಕೆರೆ ದೇವಸ್ಥಾನದಲ್ಲಿ ಪುರೋಹಿತರು ಮತ್ತು ದೇವಸ್ಥಾನದ ಕಮಿಟಿಯವರು ಇರುತ್ತಾರೆ ಎಂದರೆ ಸರಿ. ನನ್ನ ಮದುವೆಯನ್ನು ಹೊನ್ನಮ್ಮನಕೆರೆ ದೇವಸ್ಥಾನದ ಕಮಿಟಿಯಲ್ಲಿ ಬರೆಸಿರುವುದಿಲ್ಲ. ಅನಿಲ್ ಜೆ. ರವರ ಪೋಟೋ ಇದೆ. ನನಗೆ ಅನಿಲ್.ಜೆ ರವರ ಪೋಟೋವನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇಲ್ಲ ಎಂದರೆ ಸರಿ. ನಾನು ಮತ್ತು ಅನಿಲ್.ಜೆ ರವರು ಜೊತೆಗೂಡಿ ತೆಗೆಸಿರುವ ಪೋಟೋಗಳು ಇವೆ. ನನ್ನ ಮದುವೆಯಲ್ಲಿ ಯಾವುದೇ ಪೋಟೋ ತೆಗೆಸಿರುವುದಿಲ್ಲ. ನನ್ನ ಸಂಬಂಧಿಕರ ಮನೆ ಮದುವೆಯಲ್ಲಿ ನಾವು ಜೊತೆಯಾಗಿ ಪೋಟೋ ತೆಗೆಸಿರುತ್ತೇವೆ. 2 ಮತ್ತು 3 ನೇ ವಾದಿಯರು ಬೆಂಗಳೂರಿನ ಜ್ಯೋತಿ ನರ್ಸಿಂಗ್ ಹೊಂ ನಲ್ಲಿ ಜನಿಸಿರುತ್ತಾರೆ. 4 ನೇ ವಾದಿ ಮನೆಯಲ್ಲಿ ಜನಿಸಿರುತ್ತಾರೆ. 2 ಮತ್ತು 3 ನೇ ವಾದಿಯರು ಜನಿಸುವ ಕಾಲಕ್ಕೆ ನನ್ನನ್ನು ಆಸ್ಪತ್ರೆಗೆ ನನ್ನ ಗಂಡ ಸೇರಿಸಿರುತ್ತಾರೆ. ಜ್ಯೋತಿ ನರ್ಸಿಂಗ್ ಹೋಂ ಬೆಂಗಳೂರಿನ ಪೀಣ್ಯದಲ್ಲಿದೆ. ಅನಿಲ್.ಜೆ ರವರು ಜೀವಂತ ಕಾಲದಲ್ಲಿ ಬರೆದ ಯಾವುದೇ ಕಾಗದವಾಗಲೀ ಅಥವಾ ಅವರು ಸಹಿ ಮಾಡಿರುವ ಯಾವುದೇ ದಾಖಲಾತಿಯಾಗಲೀ ನನ್ನ ಬಳಿ ಇರುವುದಿಲ್ಲ. ನಿ.ಪಿ. 6 ಅನಿಲ್.ಜೆ ರವರ ಮರಣ ಪ್ರಮಾಣ ಪತ್ರದಲ್ಲಿ ಅವರ ಖಾಯಂ ವಿಳಾಸ ಅನಿಲ್.ಜೆ ಬಿನ್ ಲೇಟ್ ಜನಾರ್ಧನ್ ಕುರುಫ್ ಕಲಾ ನಿಲಯ, ಆನೆಮಹಲ್ ಎಂದು ನಮೂದಿಸಲಾಗಿದೆ ಎಂದರೆ ಸರಿ. ಅನಿಲ್.ಜೆ ರವರು ಸಕಲೇಶಪುರದ ಲಕ್ಷ್ಮಿಪುರಂ ನಲ್ಲಿ ವಾಸವಾಗಿರಲಿಲ್ಲ, ಸಾಕ್ಷಿದಾರರು ಮುಂದುವರಿದು ಅನಿಲ್.ಜೆ ಮೃತರಾದ ನಂತರ ನಾವು ಲಕ್ಷ್ಮಿಪುರಂನಲ್ಲಿ ವಾಸವಿದ್ದೇವೆ ಎಂದು ನುಡಿಯುತ್ತಾರೆ.

ನಾನು ವಿಧವಾ ವೇತನ ಪಡೆಯುತ್ತಿದ್ದೇನೆ ಎಂದರೆ ಸರಿ. ನಾನು ವಿಧವಾ ವೇತನ ಪಡೆಯುವಾಗ ನನ್ನ ವಿಳಾಸವನ್ನು ಕೆರೆಯಂಗಳ, ಲಕ್ಷ್ಮೀಪುರಂ ಸಕಲೇಶಪುರ ಎಂದು ತೋರಿಸಿರುತ್ತೇನೆ ಎಂದರೆ ಸರಿ. ನಿ.ಪಿ. 12 ರಲ್ಲಿ ಅನಿಲ್.ಜೆ ನನ್ನ ಗಂಡ ಎಂದು ಸೇರಿಸಿಕೊಂಡಿರುತ್ತೇನೆ ಎಂದರೆ ಸರಿ. ನಿ.ಪಿ. 7 , 13 ಮತ್ತು 14 ರಲ್ಲಿ ನನ್ನ ಮಕ್ಕಳ ತಂದೆಯ ಹೆಸರು ಅನಿಲ್ ಕುಮಾರ್ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿ.ಪಿ. 12 ಮತ್ತು ನಿ.ಪಿ. 7, 13 ಮತ್ತು 14 ರಲ್ಲಿ ಹೇಳಿರುವಂತೆ ಅನಿಲ್ ಕುಮಾರ್ ಮತ್ತು ಅನಿಲ್. ಜೆ. ಒಬ್ಬನೇ ವ್ಯಕ್ತಿ ಇರುತ್ತಾನೆ. ಅನಿಲ್ ಕುಮಾರ್ ಮತ್ತು ಅನಿಲ್.ಜೆ ಒಬ್ಬರೇ ಎಂದು ನನ್ನ ದಾವಾದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ಕಳೆದ 6 ವರ್ಷಗಳಿಂದ ಮತ ಚಲಾಯಿಸುತ್ತಿದ್ದೇನೆ. ನನ್ನ ಮತದಾರರ ಚೀಟಿಯಲ್ಲಿ ನನ್ನ ವಿಳಾಸವನ್ನು ಜನತಾ ಕ್ವಾರ್ಟ್ರಸ್ , ರೋಟರಿ ಶಾಲೆಯ ಹತ್ತಿರ ಸಕಲೇಶಪುರ ಎಂದು ನಮೂದು ಮಾಡಲಾಗಿದೆ. ಅನಿಲ್.ಜೆ ರವರ ಮತದಾರರ ಚೀಟಿ

ಆನೆಮಹಲ್ ವಿಳಾಸಕ್ಕೆ ಇರುತ್ತದೆ. ನನ್ನ ಮತ್ತು ಅನಿಲ್.ಜೆ ರವರ ಮತದಾರರ ಪಟ್ಟಿ ಒಂದೇ ವಿಳಾಸಕ್ಕೆ ಎಂದೂ ಬಂದಿರುವುದಿಲ್ಲ ಎಂದರೆ ಸರಿ. ಅನಿಲ್.ಜೆ ಮತ್ತು ಅನಿಲ್ ಕುಮಾರ್ ಇಬ್ಬರೂ ಒಬ್ಬನೇ ವ್ಯಕ್ತಿ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ನಿ.ಪಿ. 16 ರಿಂದ 18 ನನ್ನ ಮಕ್ಕಳ ಆಧಾರ್ ಕಾರ್ಡನ್ನು ದಿಃ 10-07-2015 ರಂದು ನಾನೇ ಮಾಹಿತಿ ಕೊಟ್ಟು ಮಾಡಿಸಿರುತ್ತೇನೆ ಎಂದರೆ ಸರಿ. ಆಧಾರ್ ಕಾರ್ಡ್ ಗೆ ಮಾಹಿತಿ ನೀಡುವ ಸಮಯದಲ್ಲಿ ನನ್ನ ವಿಳಾಸ ಚಂಪಕನಗರ, ಸಕಲೇಶಪುರ ಎಂದು ತೋರಿಸಿರುತ್ತೇನೆ ಎಂದರೆ ಸರಿ. ನನ್ನ ಮಕ್ಕಳ ಶಾಲೆಯ ದಾಖಲಾತಿಗಳಲ್ಲಿ ತಾಯಿಯ ಜಾತಿಯನ್ನು ನಮೂದು ಮಾಡಿಸಿರುತ್ತೇನೆ. ನನ್ನ ಮಕ್ಕಳನ್ನು ಶಾಲೆಗೆ ದಾಖಲು ಮಾಡುವ ಕಾಲಕ್ಕೆ ನನ್ನ ಗಂಡ ಮೃತಪಟ್ಟಿದ್ದರು. ನನ್ನ ಮಕ್ಕಳನ್ನು ನಾನೇ ಶಾಲೆಗೆ ದಾಖಲು ಮಾಡಿರುತ್ತೇನೆ. ಅನಿಲ್.ಜೆ ರವರು ಜೀವಂತವಿದ್ದಾಗ 2 ರಿಂದ 4 ನೇ ವಾದಿಯರನ್ನು ಶಾಲೆಗೆ ದಾಖಲು ಮಾಡಿರುವುದಿಲ್ಲ. ನನ್ನ ಮಕ್ಕಳ ಜೊತೆ ಅನಿಲ್.ಜೆ. ರವರು ಇರುವ ಯಾವುದೇ ಪೋಟೋ ಇರುವುದಿಲ್ಲ. ನನ್ನ ಮಕ್ಕಳನ್ನು ಶಾಲೆಗೆ ದಾಖಲು ಮಾಡುವಾಗ ತಂದೆಯ ಹೆಸರನ್ನು ಅನಿಲ್ ಕುಮಾರ್ ಎಂದು ತೋರಿಸುವ ಬದಲು ಅನಿಲ್ ಜೆ ಎಂದು ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿದಾರರು ನಾನೇ ಅನಿಲ್ ಕುಮಾರ್ ಎಂದು ಬರೆಯಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಕ್ಕಳನ್ನು ಶಾಲೆಗೆ ಸೇರಿಸುವಾಗ ನನ್ನ ಗಂಡನ ನಿಖರವಾದ ಹೆಸರು ಅನಿಲ್.ಜೆ ಎಂದು ನನಗೆ ಗೊತ್ತಿತ್ತು. ನಾನು ದಿಃ 27-02-2013 ರಂದು ಕುಟುಂಬ ಪಡಿತರ ಚೀಟಿಯನ್ನು ಪಡೆದಿರುತ್ತೇನೆ ಎಂದರೆ ಸರಿ. ನಿ.ಪಿ. 19 ಕುಟುಂಬ ಪಡಿತರ ಚೀಟಿಯಲ್ಲಿ ನನ್ನ ಗಂಡನ ಹೆಸರು ಲೇಟ್ ಜೆ. ಅನಿಲ್ ಕುಮಾರ್ ಎಂದು ಇದೆ ಎಂದರೆ ಸರಿ. ನನ್ನ ಗಂಡನ ಹೆಸರನ್ನು ಹಂತ ಹಂತವಾಗಿ ಜೆ. ಅನಿಲ್ ಕುಮಾರ್ , ಅನಿಲ್ ಕುಮಾರ್ , ಅನಿಲ್.ಜೆ ಎಂದು ಬದಲಾವಣೆ ಮಾಡಿರುವ ಬಗ್ಗೆ ನನಗೆ ನಿಖರವಾದ ಕಾರಣ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಅನಿಲ್.ಜೆ ಎಂದು ಹೇಳಿರುತ್ತೇನೆ , ಬರೆದುಕೊಳ್ಳುವಾಗ ಅವರು ಹಾಗೆ ಬರೆದಿರುತ್ತಾರೆ ಎಂದು ಹೇಳುತ್ತಾರೆ. ಅನಿಲ್.ಜೆ ರವರ ಹೆಸರನ್ನು ಒಂದೇ ರೀತಿ ಎಲ್ಲಾ ಕಡೆ ಇರುವಂತೆ ಸರಿಪಡಿಸಿಕೊಳ್ಳಲು ಯಾವುದೇ ಕ್ರಮ ತೆಗೆಕೊಂಡಿರುವುದಿಲ್ಲ ಎಂದರೆ ಸರಿ. ನಾನು ಸಕಲೇಶಪುರದ ಚಂಪಕನಗರ , ಜನತಾ ಕ್ವಾರ್ಟರ್ಸ್ ಮತ್ತು ಲಕ್ಷ್ಮಿಪುರಂನಲ್ಲಿ ವಾಸವಿರುವಾಗ ನನ್ನ ಗಂಡ ಮೃತಪಟ್ಟಿದ್ದರು. 2000 ರಿಂದ 2005 ರ ನಡುವೆ ನಾನು ಮತ್ತು ಅನಿಲ್ ಜೆ ರವರು ಗಂಡ ಹೆಂಡತಿ ಎಂದು ತೋರಿಸಲು ಸರ್ಕಾರಿ ಕಛೇರಿಯಲ್ಲಿ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ. ಜನಾರ್ಧನ್ ಕುರುಫ್ ಮತ್ತು ನಾಗಮ್ಮ ನನ್ನ ಅತ್ತೆ ಮಾವ ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ.

ನಾನು ಮತ್ತು ನನ್ನ ಮಕ್ಕಳು ಜನಾರ್ಧನ್ ಕುರುಫ್ ಮತ್ತು ನಾಗಮ್ಮ ರವರ ಜೊತೆ ತೆಗೆಸಿಕೊಂಡಿರುವ ಯಾವುದೇ ಪೋಟೋ ಇಲ್ಲ ಎಂದರೆ ಸರಿ. ಜನಾರ್ಧನ್ ಕುರುಫ್ ನನ್ನ ಮದುವೆ ಪೂರ್ವದಲ್ಲಿಯೇ ಮೃತಪಟ್ಟಿದ್ದರು. ನಾಗಮ್ಮ ರವರು ಆನೇಮಹಲ್ ನಲ್ಲಿ ಮೃತಪಟ್ಟಿರುತ್ತಾರೆ ಆದರೆ ದಿನಾಂಕ ನನಗೆ ನೆನಪಿಲ್ಲ.

ವಾದ ಪತ್ರ ಪ್ಯಾರಾ ನಂ 8 ರಲ್ಲಿ ಹೇಳಿರುವ ಹರೀಶ್ ಎಂಬ ವ್ಯಕ್ತಿಯು ನನ್ನ ಗಂಡನ ಮಾವನ ಮಗ , ನಾನು ಹರೀಶ್ ರವರ ಮನೆ ಕೇರಳಕ್ಕೆ ಹೋಗಿರುವುದಿಲ್ಲ. ಹರೀಶ್ ರವರು ನನ್ನ ತಾಯಿಯ ತಂಗಿಯ ಮನೆಗೆ ಬರುತ್ತಿದ್ದಾಗ ಅವರು ಪರಿಚಯವಾಗಿರುತ್ತಾರೆ. ಹರೀಶ್ ರವರು ನನ್ನ ಅಂಕಲ್ ಗೆ ಪರಿಚಯಸ್ಥರಾಗಿದ್ದರು. ಸದರಿ ಹರೀಶ್ ರವರು ನಮ್ಮ ಮದುವೆಗೆ ಬಂದಿರುವುದಿಲ್ಲ. ನಾನು ಅನಿಲ್.ಜೆ ರವರು ಸಹಿ ಮಾಡಿರುವ ದಾಖಲೆಯಲ್ಲಿ ಅವರ ಸಹಿಯನ್ನು ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಹಕ್ಕುಖುಲಾಸೆ ಕರಾರು ಪತ್ರ ತೋರಿಸಿದ್ದು ಅದರ ಮೂರೂ ಪುಟಗಳಲ್ಲಿ ಕಾಣುವ ಸಹಿ ಜೆ. ಅನಿಲ್ ಕುಮಾರ್ ಅವರದ್ದೆ ಎಂದು ಒಪ್ಪಿದ ಮೇರೆಗೆ ಅದನ್ನು ನಿ.ಡಿ. 1 ಎಂದು ಗುರುತಿಸಲಾಯಿತು. ನಿ.ಡಿ 1 ರಲ್ಲಿ ಜೆ.ಅನಿಲ್ ಕಮಾರ್ ರವರ ಸಹಿಯ ಕೆಳಗೆ ಪಾವನ ಎಂಬುವವರ ಸಹಿ ಇದೆ ಎಂದರೆ ಸರಿ. ನಾನು ಹೇಳುವ ಜೆ. ಅನಿಲ್ ಕಮಾರ್ ಸಹಿ ಇರುವ ಪತ್ರದಲ್ಲಿ ಜೆ ಅನಿಲ್ ಕುಮಾರ್ ರವರ ಪಾವನವರನ್ನು ದಿಃ 26-06-1998 ರಲ್ಲಿ ಮದುವೆಯಾಗಿರುತ್ತಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಜನಾರ್ಧನ್ ಮತ್ತು ನಾಗಮ್ಮ ರವರ ಕೊನೆಯ ಪುತ್ರ ಜೆ ಅನಿಲ್ ರವರ ಮದುವೆ ಸಕಲೇಶಪುರದ ಪಾವನ ರವರ ಜೊತೆ ದಿಃ 26-06-1998 ರಂದು ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ. 1 ನ್ನು ಜೆ.ಅನಿಲ್ ಕುಮಾರ್ ರವರು ಅವರ ಧರ್ಮಪತ್ನಿಯಾದ ಪಾವನಗೆ ಆಸ್ತಿಯ ಸಂಬಂಧ ಬರೆದುಕೊಟ್ಟ ಪತ್ರ ಎಂದರೆ ನನಗೆ ಗೊತ್ತಿಲ್ಲ ನಿ.ಡಿ. 1 ನ್ನು ಗಂಗೇಗೌಡ ಎಂಬ ವಕೀಲರು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಜೆ. ಅನಿಲ್ ಕುಮಾರ್ ರವರನ್ನು ಮದುವೆಯಾಗುವ ಪೂರ್ವದಲ್ಲಿ ಅವರಿಗೆ ಮದುವೆಯಾಗಿದೆಯೋ ಇಲ್ಲವೋ ಎಂದು ನಾನಾಗಲೀ ನಮ್ಮ ಮನೆಯವರಾಲೀ ವಿಚಾರಣೆ ಮಾಡಿರುವುದಿಲ್ಲ. ಜೆ. ಅನಿಲ್ ಕುಮಾರ್ ರವರು ನನ್ನನ್ನು 2000 ನೇ ಸಾಲಿನ ಮಾರ್ಚ್ 11 ಮತ್ತು 12 ರಂದು ಹೊನ್ನಮ್ಮನಕೆರೆ ದೇವಸ್ಥಾನದಲ್ಲಿ ಶಾಸ್ತ್ರ ಸಂಪ್ರದಾಯದ ಪ್ರಕಾರ ಮದುವೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ರವರು ಮೃತಪಟ್ಟ ವಿಚಾರ ನನಗೆ ಈಗ್ಗೆ 4 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನಿ.ಪಿ. 33 ರಲ್ಲಿ ದಾವಾ ಆಸ್ತಿಯು ಜನಾರ್ಧನ್ ಕುರುಫ್ ರವರ ಪಿತ್ರಾರ್ಜಿತ ಆಸ್ತಿ ಎಂದು ಹೇಳಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯು ಜನಾರ್ಧನ್ ಮರಣಾನಂತರ ನಾಗಮ್ಮ ರವರಿಗೆ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ಅನಿಲ್ ಜೆ ಎಂಬುವವರು ಅವರ ಜೀವಂತ ಕಾಲದಲ್ಲಿ

ಜನಾರ್ಧನ್ ಮತ್ತು ನಾಗಮ್ಮ ರವರನ್ನು ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡುವಂತೆ ಕೇಳಿರುತ್ತಾರೆ. ಜಾನರ್ಧನ ಮತ್ತು ನಾಗಮ್ಮ ರವರು ಸಹಿ ಮಾಡುತ್ತಿದ್ದರೋ ಅಥವಾ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ದಿಃ 19-01-1968 ರಂದು ದಾವಾ ಆಸ್ತಿಯನ್ನು ನಾಗಮ್ಮರವರು ಗುಂಡಪ್ಪರವರಿಂದ ಕ್ರಯಪತ್ರದ ಮುಖಾಂತರ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಗಂಡ 2005 ರಲ್ಲಿ ಮೃತಪಟ್ಟ ನಂತರ ಅಂದಿನಿಂದ 2018 ರಲ್ಲಿ ದಾವಾಸಲ್ಲಿಸುವ ವರೆಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಹಕ್ಕು ಚಲಾಯಿಸಿ ನೋಟೀಸ್ ನೀಡಿರುತ್ತೇನೆ. ಅನಿಲ್.ಜೆ ರವರು ನನ್ನ ಗಂಡ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅನಿಲ್ ಜೆ ಮೃತಪಟ್ಟ ನಂತರ ಅವರ 11 ನೇ ದಿನ ವೈಕುಂಠ ಸಮಾರಾಧನೆಯ ಕಾರ್ಡನ್ನು ಮಾಡಿಸಿರುವುದಿಲ್ಲ. ಅನಿಲ್.ಜೆ ಮತ್ತು ನನಗೂ ಯಾವುದೇ ವೈವಾಹಿಕ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಜನಾರ್ಧನ್ ಕುರುಫ್ ಮತ್ತು ನಾಗಮ್ಮ ರವರ ಮಗ ದಿಃ 11-05-2005 ರಂದು ಮೃತಪಟ್ಟ ನಂತರ ನಾನೇ ನಿ.ಪಿ. 12 ರಂತೆ ವಿಧವಾ ವೇತನಾ ಪತ್ರವನ್ನು ಸೃಷ್ಟಿ ಮಾಡಿಕೊಂಡು ಈ ದಾವೆಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ 2 ರಿಂದ 4 ರವರು ನನ್ನ ಮತ್ತು ಜನಾರ್ಧನ್ ಮತ್ತು ನಾಗಮ್ಮ ರವರ 4 ನೇ ಪುತ್ರ ಅನಿಲ್.ಜೆ ರವರ ದೈಹಿಕ ಸಂಬಂಧದಿಂದ ಜನಿಸಿದ ಮಕ್ಕಳಲ್ಲ ಎಂದರೆ ಸರಿಯಲ್ಲ.

ದಿಃ 10-04-2017 ರಂದು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ರಾಷ್ಟ್ರೀಯ ಹೆದ್ದಾರಿ ಸಕ್ಷಮ ಪ್ರಾಧಿಕಾರದವರಿಗೆ ನನ್ನ ವಕೀಲರ ಮುಖಾಂತರ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸ್ ನಡಿ ಪ್ರತಿವಾದಿಯರಿಗೆ ಯಾವುದೇ ರೀತಿ ಭೂಸ್ವಾಧೀನ ಪರಿಹಾರ ನೀಡಬಾರದೆಂದು ಕೇಳಿಕೊಂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯರಿಗೆ ಸದರಿ ನೋಟೀಸ್ ನ ಪ್ರತಿಯನ್ನು ಕಳುಹಿಸಿರುವುದಿಲ್ಲ ಎಂದರೆ ಸರಿ. ದಿಃ 25-10-2017 ರಂದು ಪಿರ್ಯಾದಿಯ ವಿರುದ್ಧ ಒಂದು ಖಾಸಗಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯರು ಭೂ ಸ್ವಾಧೀನ ಪ್ರಾಧಿಕಾರದಿಂದ ಪರಿಹಾರವನ್ನು ಪಡೆದುಕೊಂಡಿರುತ್ತಾರೆ ಅದು ಸರಿಯಲ್ಲ ಎಂದು ಖಾಸಗಿ ಪಿರ್ಯಾದು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪಿರ್ಯಾದಿಯಲ್ಲಿ ಪ್ರತಿವಾದಿಯರು ಮೋಸ ಮತ್ತು ವಂಚನೆ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಖಾಸಗಿ ಪಿರ್ಯಾದು ದಾಖಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ಅವರು ಮೋಸ ವಂಚನೆ ಮಾಡಿರುತ್ತಾರೆ ಎಂದು ನೋಟೀಸ್ ನೀಡಿರುತ್ತೇನೆ. ನಾನು ಪ್ರತಿವಾದಿಯರಿಗೆ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ , ನೋಟೀಸ್ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಸಗಿ ಪಿರ್ಯಾದಿ ದಾಖಲಿಸುವ ಪೂರ್ವದಲ್ಲಿ ಪೊಲೀಸ್ ಠಾಣೆಯಲ್ಲಿ ದೂರು

ಕೊಟಿಟರುತ್ತೇನೆ. ಪೊಲೀಸರು ಯಾವ ಕಾರಣಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಪಡದ ಸದಸ್ಯರಾಗಿರುವುದರಿಂದ ಅವರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ ನಾನು ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಮತ್ತು ಪ್ರತಿವಾದಿಯರನ್ನು ಕರೆಯಿಸಿ ಕೂಲಂಕುಷವಾಗಿ ತನಿಖೆ ಮಾಡಿರುತ್ತಾರೆ ಎಂದರೆ ಸರಿ. ನಮಗೂ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಯಾವುದೇ ಸಂಬಂಧ ಇರುವುದು ಕಂಡುಬರದ ಕಾರಣ ಪೊಲೀಸರು ನನ್ನ ದೂರನ್ನು ವಿಲೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ. 30 ಮೃತಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ದಿಃ 08-11-2017 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿ.ಪಿ. 30 ದಾಖಲಾತಿಯನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದಿ ಸಲ್ಲಿಸಿರುತ್ತೇನೆ ಹಾಗೂ ನೋಟೀಸ್ ಕೊಟ್ಟಿರುತ್ತೇನೆ ಎಂದರೆ ಸರಿ. ತಹಶೀಲ್ದಾರರು ನೀಡಿದ ಕುಟುಂಬದ ಸದಸ್ಯರ ದೃಢೀಕರಣ ಪತ್ರದಲ್ಲಿ ಪ್ರತಿವಾದಿಯರು ಯಾರನ್ನೂ ನಮ್ಮ ಕುಟುಂಬದ ಸದಸ್ಯರು ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ನಾನು ಕುಟುಂಬ ಸದಸ್ಯರ ದೃಢೀಕರಣ ಪತ್ರ ಪಡೆಯುವ ಕಾಲಕ್ಕೆ ಜನಾರ್ಧನ್ ಕುರುಫ್ ಮತ್ತು ಕುಟುಂಬದವರನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಮಕ್ಕಳು ಜನಾರ್ಧನ ಕುರುಫ್ ರವರ ವಂಶಸ್ಥರೆಂದು ತೋರಿಸಲು ಉಪ ವಿಭಾಗಾಧಿಕಾರಿಯವರ ಕಛೇರಿಯಿಂದ ಪತ್ರ ಪಡೆದಿರುತ್ತೇನೆ ನಾನು ಮತ್ತು ನನ್ನ ಮಕ್ಕಳು ಜನಾರ್ಧನ್ ಕುರುಫ್ ರವರ ಕುಟುಂಬಕ್ಕೆ ಸಂಬಂಧಪಡದ ಕಾರಣ ಅವರು ಭೂ ಸ್ವಾಧೀನ ಪರಿಹಾರ ಪಡೆಯುವ ಕಾಲಕ್ಕೆ ನಮ್ಮನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಮೇಲೆ ಮಾನಸಿಕ ಒತ್ತಡ ತರುವ ಉದ್ದೇಶದಿಂದ ಖಾಸಗಿ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲಾತಿಗಳನ್ನು ಉಪ ವಿಭಾಗಧಿಕಾರಿಯವರ ಕಛೇರಿಗೆ ಸಲ್ಲಿಸಿರುತ್ತೇನೆ. ಅನಿಲ್.ಜೆ ರವರು ಮೃತಪಡುವ ದಿನದ ವರೆಗೂ ನನ್ನನ್ನು ಯಾವುದೇ ರೀತಿಯಲ್ಲಿ ಮದುವೆಯಾಗಿರುವುದ್ಲಿ ಎಂದರೆ ಸರಿಯಲ್ಲ. ಅನಿಲ್.ಜೆ ರವರು ಸಕಲೇಶಪುರದ ಪಾಪಣ್ಣ ಮತ್ತು ಕಾಮಾಕ್ಷಿಯವರ ಪುತ್ರಿ ಪಾವನರವನ್ನು ಮಾತ್ರ ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ ಸದರಿ ಪಾವನ ಜೆ ಅನಿಲ್ ಕುಮಾರ್ ರವರು ಇದೇ ಊರಿನ ಖಾಯಂ ವಾಸಿಗಳಾದ ಪಾಪಣ್ಣ ಮತ್ತು ಕಾಮಾಕ್ಷಿ ರವರ ಮಗಳು ಎಂದರೆ ಸರಿಯಲ್ಲ. ದಿಃ 26-08-1998 ರಂದು ಜೆ ಅನಿಲ್ ಕುಮಾರ್ ಮತ್ತು ಪಾವನ ರವರ ಮದುವೆ ಕಾನೂನು ಬದ್ದವಾಗಿ ಆಗಿರುವ ಮದುವೆಯಾಗಿದ್ದು , ನಾನು ಹೇಳುವಂತೆ ನನ್ನ ಮತ್ತು ಜೆ ಅನಿಲ್ ಕುಮಾರ್ ರವರ ನಡುವೆ ಆದ ಮದುವೆಗೆ ಕಾನೂನಿನಡಿಯಲ್ಲಿ

ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಜೆ ಅನಿಲ್ ಕುಮಾರ್ ರವರು ಪಾವನ ರವರನ್ನು ಮದುವೆಯಾಗಿದ್ದರಿಂದ ನನ್ನನ್ನು ಮದುವೆ ಮಾಡಿಕೊಳ್ಳುವ ಯಾವುದೇ ಅವಶ್ಯಕತೆ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ಅವರದೇ ಆದ ವ್ಯವಹಾರಗಳನ್ನು ಮಾಡುತ್ತಿರುತ್ತಾರೆ ಎಂದರೆ ಸರಿ. ಅವರಿಗೆ ಸಮಾಜದಲ್ಲಿ ಗೌರವ ಘನತೆ ಇದೆ ಎಂದರೆ ಸರಿ. ನಾನು ಕ್ರಿಮಿನಲ್ ಮತ್ತು ಸಿವಿಲ್ ವ್ಯಾಜ್ಯಗಳನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿದ್ದಲ್ಲಿ ಅಕ್ರಮವಾಗಿ ಪಾಯಿದೆ ಮಾಡಿಕೊಳ್ಳಬಹುದು ಎಂದು ದುರುದ್ದೇಶದಿಂದ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಜೆ. ಅನಿಲ್ ಕುಮಾರ್ ರವರನ್ನು ಮದುವೆಯಾಗದೇ ಇದ್ದ ಕಾರಣ ನನ್ನ ವಾದಪತ್ರದಲ್ಲಿ ಮದುವೆ ದಿನಾಂಕ ಮತ್ತು ಸ್ಥಳ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಹೇಳಿದ ಹರೀಶ್ ರವರು 5 ನೇ ಪ್ರತಿವಾದಿಯರವರ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಹರೀಶ್ ರವರು ಅಂಗಡಿಯಲ್ಲಿ ಏನೋ ಮೋಸ ಮಾಡಿರುತ್ತಾನೆ ಎಂದು ಅವನನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದ್ವೇಷದಿಂದ ಹರೀಶನು ನನಗೆ ಜನಾರ್ಧನ್ ಕುರುಫ್ ರವರ ಕುಟುಂಬದ ಎಲ್ಲಾ ವಿಚಾರಗಳನ್ನು ತಿಳಿಸಿ ಅವರ ವಿರುದ್ಧ ದ್ವೇಷ ತೀರಿಸಿಕೊಳ್ಳುವ ಉದ್ದೇಶದಿಂದ ನನ್ನ ಮುಖಾಂತರ ಈ ದಾವೆ ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. 2 ರಿಂದ 4 ನೇ ವಾದಿಯರ 1 ನೇ ತರಗತಿಯ ದಾಖಲಾತಿ ವಿವರಗಳನ್ನು ತರಲು ಸಾಧ್ಯವಾಗದ ಕಾರಣ ನಾನು ಅವರ 9 ನೇ ತರಗತಿಯ ದಾಖಲಾತಿ ವಿವರಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅನಿಲ್ ಜೆ ರವರನ್ನು ನಿಜವಾಗಿಯೂ ವಿವಾಹವಾಗಿದ್ದರೆ ನನ್ನ ಮಕ್ಕಳನ್ನು ಶಾಲೆಗೆ ದಾಖಲು ಮಾಡುವ ಕಾಲಕ್ಕೆ ನಾಯರ್ ಜಾತಿಗೆ ಸೇರಿದವರು ಎಂದು ಹೇಳಿ ದಾಖಲಿಸುತ್ತಿದ್ದೆ , ನಾನು ಅನಿಲ್ ಜೆ ರವರನ್ನು ಮದುವೆಯಾಗದ ಕಾರಣ ಮಕ್ಕಳನ್ನು ಒಕ್ಕಲಿಗ ಜಾತಿಗೆ ಸೇರಿದವರು ಎಂದು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಂಬಂದಿ ಪೂರ್ವಕ್ಕೆ ತೋಟ , ಪಶ್ಚಿಮಕ್ಕೆ ಬ್ಯಾಂಕ್ , ಉತ್ತರಕ್ಕೆ ಉಳಿಕೆ ಜಾಗ , ದಕ್ಷಿಣಕ್ಕೆ ಶೇಖ್ ಎಂಬುವವರ ಮನೆ ಬರುತ್ತದೆ. ನಾನು ದಾವೆಯಲ್ಲಿ ಕೇಳಿರುವಂತೆ ನನಗಾಗಲೀ, ನನ್ನ ಮಕ್ಕಳಿಗಾಗಲೀ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅನಿಲ್ ಕುಮಾರ್ ರವರು ಮೃತಪಟ್ಟ ನಂತರ ನಾನು ಪ್ರತಿವಾದಿಯರಿಗೆ ನನಗೆ ಮತ್ತು ನನ್ನ ಮಕ್ಕಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದು ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ನೇರವಾಗಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡ ಮೃತಪಟ್ಟು ಶವ ಸಂಸ್ಕಾರ ಮಾಡುವ ದಿನವೇ ಕೇಳಿರುತ್ತೇವೆ. ನಾನು ಕೇಳಿದ ನಂತರ ಪ್ರತಿವಾದಿಯರು ನನ್ನ ಹಿಸ್ಸೆ

ಕೊಟ್ಟಿರುವುದಿಲ್ಲ. ತಕ್ಷಣವೇ ದಾವಾ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ, ಸಾಕ್ಷಿದಾರರು ಕೊಡುತ್ತಾರೆ ಎಂದು ಕಾಯುತ್ತಿದ್ದೆವು ಎಂದು ನುಡಿಯುತ್ತಾರೆ.

5 ನೇ ಪ್ರತಿವಾದಿ ಪರ ಶ್ರೀ ಐ ಇ ಪಿ ವಕೀಲರು ಹಾಜರಿದ್ದು 1 ರಿಂದ 4 ಮತ್ತು 6 ರಿಂದ 8 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು 5 ನೇ ಪ್ರತಿವಾದಿ ಪರವಾಗಿ ಅಳವಡಿಸಿಕೊಳ್ಳುವಂತೆ ಕೇಳಿದ ಮೇರೆಗೆ ಯಥಾವತ್ತಾಗಿ ಅಳವಡಿಸಿಕೊಳ್ಳಲಾಯಿತು.

9 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಃ ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು